(ii) Increase in Water rate and demand for Security Deposit by the B.W.S.S.B.

SRI A. LAKSHMISAGAR (Chickpet).—Sir, I call the attention of the Hon. Minister for Housing and Urban Development to the situation arising out of the increase in water rate by the Bangalore Water Supply and Sewerage Board and also demand for Security amounts.

SRI DHARAM SINGH (Minister for Housing and Urban Development).—Sir, I would like to make the following statement.—

The Karnataka Electricity Board revised the electricity tariff upwardly with effect from 1-2-1981. The B.W.S.S.B. consumes a lot of power as water is pumped over a height of 1550 feet and over a distance of 77 kilometers. As a result of like in power tariff, the electricity bill of the B.W.S.S.B. which was about Rs. 300 lakhs per annum shot up to Rs. 450 lakhs per annum, an increase of Rs. 150 lakhs per annum.

The electricity tax rates were also revised in August 1981. Owing to this revision, the electricity tax increase devolving on the B.W.S.S.B. works out to Rs. 45 lakhs per annum.

The B.W.S.S.B. was declared as an 'Industry' by the Supreme Court of India during 1978. Consequently, the staff had to be given work according to the Industries Act. They had also to be provided with amenities and terms of service as per the concerned statute. There is also increase in emoluments of the staff from time to time since the date B.W S.S.B. was declared as an Industry. The increase in expenditure devolving on account of the foregoing factors works out to Rs. 75 lakhs per annum.

The B.W.S.S.B. spends quite a sum of money for its operations in connection with the provision of water to the citizens of Bangalore The prices of articles such as Alum, Chlorine, Oil etc., required in carrying out the operations for the supply of water to the citizens of Bangalore has registered quite an increase. This increase is in tune with the pattern of general increase under all materials. Extra cost of Rs. 75 lakhs per annum has devolved on the board consequently.

The extra cost which the B.W.S.S.B. has to meet on account of the foregoing factors is Rs. 350 lakhs per annum.

It is a duty cast on the B.W.S.S.B. under the Bangalore Water Supply Act, 1964. to levy such rates as would result in realisation of revenue sufficient to meet its expenditure. In order to realise the extra expenditure of Rs. 350 lakhs per annum referred to above, the B.W.S.S.B. had to revise the rates. The revision has been effected so as to have an additional revenue of about Rs. 300 lakhs per

annum only. Even with the revision, there will be a marginal deficit. The Board has to balance this marginal deficit.

In revising the water rates, the Board has taken abundant care not to burden the cost of water devolving on the poorer sections of the domestic consumers. The domestic consumers utilising less than 25,000 litres per month happen to be 50% of the total consumers. In the case of these consumers the Board has not revised the rate at all. The next category of consumers are those consuming water above 25,000 litres but below 50,000 litres per month. These consumers are middle class consumers. In their cases, the tariff revision has been from 35 paise per thousand litres to 40 paise. Thus, the increase in this category is marginal.

It is only in respect of the balance domestic consumers forming 28% of the total consumers and the non-domestic consumers, there has been a greater levy. This has been done with a view to obtaining the additional sum needed by the Board from them, while the Board would not burden the lower strata of consumers.

The practice of collecting deposits from consumers is nothing new. It was there even during 1965 when the Bangalore Water Supply Regulations, 1965 was issued. At that time, it was a specified sum required as deposit from all consumers. Inspite of making it uniform for all the supplies, the Board made it dependent on the size of the bore of pipes in 1974. By an amendment to the Bangalore Water Supply Regulations issued on 19-10-1974, the rate of deposits was changed and it was made dependent on the side of the bores of pipes. This was further revised and made dependent on the factor of consumption of water. Accordingly, from 1-11-1981, the deposit is related to the monthly charge paid by each consumer. Thus, the element of deposit has since been rationalised.

The Board raises bills for water supplied by it during a month in the next month. It allows time for payment. It so happens that in regard to water which is very essential for life itself, the Board does not take step of disconnection in the case of non-payment on time. So much so, there will be delay in accretion of revenue to the Board. So, the coverage by way of deposit is considered essential. Such a practice is prevailing in other public utility bodies such as K.E.B.

The burden of deposit on the domestic consumers is estimated to be less than 10% of the total estimated deposit collection, in as much as the amount from the domestic sphere as deposit is about Rs. 30 lakhs as against the total estimated deposit receipt of over Rs. 350 lakhs.

50 per cent of the domestic consumers pay 50 paise per month and the deposit in their cases will be only Rs. 1.50 paise. This sum is almost negligible. So, 50 per cent of the domestic consumers will not be affected to any appreciable extent. 22 per cent of the domestic consumers are in the category of consumption of 25,000 liters to below 50,000 litres and in the case of these consumers. the deposit will be not much. In the case of 72% of the consumers, therefore, either the deposit will be almost negligible or small. It is only in respect of the 28 per cent of the domestic consumers and the non-domestic consumers that the mopping up of deposit is envisaged. Thus, the burden is cast on people suseptible of bearing it and people not suseptible of bearing it have been left off.

The matter of deposit was discussed by me with the M.Ps and the members of the Legislature of the City at two meetings, latest meeting being on 22nd January 1982. At that meeting I have explained these points personally briefly. I have even agreed that there should be no coercion as regards immediate payment of these deposits and that adequate time and facility to pay in instalments should be allowed by the B.W.S.S.B. Instructions have accordingly been issued by the B.W.S.S.B. According to these instructions, tnere shall be no disconnection of water supply in case of non payment of deposits even by March 1982 end.

The deposit is very necessary not only from the point of view of having coverage from consumers in relation to monies owned by them as water charges, but also from the point of view of financing the major capital works. A major capital work which is under execution for the benefit of the citizen of Bangalore is the Cauvery Water Supply Scheme Stage-II involving an estimated expenditure of Rs. 55.5 crores. In the financing pattern of this scheme, it has been stipulated that a sum of Rs. 3.5 crores should be had by collecting it from the industries as the beneficiaries The industries who had first agreed to participate in this financing programme to the extent of Rs. 3.5 crores (during 1979-80) later after a year or so, mentioned that according to their constitution it would be difficult to provide loans as such provisions to loans had not been specifically provided for in their rules and that therefore any collection of money from them could only be according to Provisions law. Pursuant to this position and pursuant however to the need for finances for the capital project in the background of the insistence of a major financing agency *viz*,, LIC that the Board must get the money as originally envisaged, the Board had to explore suitable statutory financing and in tune with this requirement, the Board has formulated the Deposit Scheme, taking care that the burden of the scheme does not fall on the common man.

The Board has issued a regulation in regard to collection of deposit under the relevant provisions of Bangalore Water Supply & Sewerage Act, 1964. These provisions have been cited in the Notification concerned. This is in relation to covering the levy by necessary statutory background. It may be mentioned that this matter has, however, been taken to the High Court by some Hotel Proprietors and the same is now before the High Court.

SRI A. LAKSHMISAGAR —Sir, I have a few submissions to make. The Minister's statement blandly states that the payment for deposit has been under the regulations, The only section under which BWSSB can envisage the situation under which they can collect water rates, is found in Section 31.

> '31. Payment to be made for water supplied :-Notwithstanding anything contained in Section 127 or any law, contract or other instrument, for all the water supplied under this Act, payment shall be made at such rates, at such times and under such conditions as may be specified by regulations, and different rates may be prescribed for supply of water for different purposes.''

There is no expression that it empowers the BWSSB to collect demand deposits. There is no such word, there is no such expression. Even if you strain the language of Section 31, you cannot read in to the expression, 'minimum deposits'.

SRI Y. RAMAKRISHNA.—Mr. Speaker, When the matter is in High Court covering the same Section, better it is avoided.

SRI A. LAKSHMISAGAR..—I only made a passing mention. I am quite aware of the pendency of the writ petition. What is the rationale in fixing the minimum deposit. ? Is there any rule or regulation which prescribes an objective test by which so much is the minimum deposit ? There is no such rule or regulation.

The next point is, the water rate is already raised. I am not now speaking about the rise in water rates. But I am expressing to myself the question of demand notices having been issued for collection of minimum deposits. On what they are collecting minimum deposits ? The notification does not explain any such thing. They blandly say that the regulation give them the power. I should like to know where from you got the authority. The other and more important point is that this deposit is not refundable. This deposit is also not returnable : not adjustable towards the payment of monthly bills for water consumption ; it does not carry interest. It is an instance of unlegislated taxation. BWSSB is not the taxing authority.

(MR. DEPUTY SPEAKER in the Chair)

SRI Y. RAMAKRISHNA.—Deposit remains deposit only.

SRI A. LAKSHMISAGAR.—I have a fixed deposit in Bank. If you use the expression deposit ipso facto it must carry some interest, may be nominal. You cannot escape the liability under the law. You collect deposit and do not pay interest uponit. It is not even refundable. You please see the position. This collection of minimum deposits, has all the trappings of extortion. Merely because water is essential thing and if they not pay water connection will not be there and making use of this difficult situation. you seem to have proceeded upon this course of collection of minimum deposit from the consumers. Where is the justification for it legal or moral ? I should like to know. The other explanation that the Hon.Minister has advanced is that the Board is now executing the Cauvery II Stage at a cost of Rs. 55.5 crores and the Board has already incurred an expenditure of over Rs 22 crores. The remaining amounts have got to be found and therefore they are thinking of this. The total expected income from this is Rs. 370 lakhs-mere Rs. 370 lakhs, whereas the total cost of the execution of the second stage is of the order of Rs. 60 crores though the original estimated cost was Rs. 55.5 crores. This is not correct explanation that should be odvanced for collection of demand deposits.

The next point is, every person who has got a tap pays rent to the meter. Pipe belongs to the owner or occupier. Then, for what you are collecting minimum deposits, I fail to understand. The real reason is that the Government which was under obligation to advance a loan of nearly Rs. 22 crores to BWSSB for execution of second stage of Cauvery ; it has till December 1980. paid only about Rs. 10 crores. The remaining loan amount–please note LOAN, has not been paid, according to my information, to the Board during the year 1981–82 For the laches on the part of the Government you want to tax and burden the consumers. There is no water ; there is irregular supply of water. People are clamouring and shouting for water. I do not know when they are going to lose their patience. Most acute situation so far as the water supply is concerned it is to be found in Bangalore. Therefore, anyhow the matter is before the Court. I appeal to the Hon.Minister to keep this collection in abeyance and expedite the matters in the Court so that the matter will be clinched one way or the other. This is the correct way of dealing with this qustion and therefore I appeal to the Minister finally to keep the collection of minimum deposits in abeyance.

3-30 P.M.

There is another point. The Minister said that it affects only people in higher income groups. There are common meters in Bangalore people which supply water to a number of families. They also come under water rates hike. These are all problems which we had occasion to explain to the Minister. The other point is that now the Minister says that till 31st March, 1982 if minimum deposits are not paid there will not be any corecion and no disconnection But, after 31st.....

SRI SHEERNALY M. CHANDRASHEKHAR.—I raise a Point of Order. Under Rule 63 is it permissible to make an elaborate speech ? I do not know. It is very specific.

SRI A. LAKSHMISAGAR.—I am concluding. Therefore, my submission is that I want the Minister to give an assurance that there will be no coercion and no disconnection even after 31st March, 1982 till the matter is settled in the High Court.

ಶ್ರೀ ಪಿ. ರಾಂದೇವ್ (ವಲ್ಲೀಶ್ವರಂ).—ಮಾನ್ಯ ಅಧ್ಯಕ್ಷರೆ, ಇದು ೪೨ ಲಕ್ಷ ಜನರು ಕುಡಿಯುವ ನೀರಿನ ಸಮಸ್ಯೆ. ಇದಕ್ಕೆ ಹಣ ಬೇಕಾಗಿದೆ. ಮಾನ್ಯ ಮಂತ್ರಿಗಳ ಹೇಳಿಕೆಯಲ್ಲಿ "In revising the water rates, the Board has taken abundant care not to burden the cost of water devolving on the poorer sections of the domestic consumers" ಎಂದು ಹೇಳಿದ್ದಾರೆ. ಈ ಬೆಂಗಳೂರು ನಗರದಲ್ಲಿ ವಠಾರದ ಮನೆಗಳೇ ಬಹಳ ಜಾಸ್ತಿ ಇವೆ. ಒಂದೊಂದು ವಠಾರದಲ್ಲಿ ೧೦-೧೨ ಮನೆಗಳಿವೆ. ಅಲ್ಲೆಲ್ಲಾ ಕಾರ್ಮಿಕರು ಮತ್ತು ಬಡವರೇ ಹೆಚ್ಚಾಗಿರುತ್ತಾರೆ. ಅಷ್ಟು ಮನೆಗಳಿಗೂ ಸೇರಿ ಒಂದೇ ವಿಾಟರ್ ಇರುತ್ತದೆ. ಒಂದು ಮನೆಗೆ ೧೦ ಸಾವಿರ ಗ್ಯಾಲನ್ ನೀರನ್ನು ಫ್ರೀಯಾಗಿ ಕೊಡುತ್ತೇವೆಂದು ಹೇಳುತ್ತೀರಿ. ಒಂದು ವಠಾರದಲ್ಲಿ ೧೦-೧೨ ಮನೆಗಳಿದ್ದರೆ ಅಷ್ಟು ಮನೆಗಳಿಗೆ ಎಷ್ಟು ನೀರು ಬೇಕಾಗುತ್ತದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಸದಾಶಿವ ನಗರದಲ್ಲಿ ಯಾರು ವಾಸ ಮಾಡುತ್ತಿದ್ದಾರೆ ಅವರಿಗೆ ಈ ರೀತಿ ನೀರಿನ ತೊಂದರೆ ಆಗುವುದಿಲ್ಲ. ಮಂತ್ರಿಗಳ ಮನೆಗಳಿಗೆ ಈ ರೀತಿ ತೊಂದರೆಯಾಗುವುದಿಲ್ಲ. ಆದರೆ ಶ್ರೀರಾಂಪುರದಲ್ಲಿ, ಯಶವಂತಪುರದಲ್ಲಿ ಇನ್ನೂ ಮುಂತಾದ ಕಡೆಗಳಲ್ಲಿ ಎಲ್ಲೆಲ್ಲಿ ೮-೧೦ ಮನೆಗಳು ಒಂದೇ ವಠಾರದಲ್ಲಿ ಇರುತ್ತವೆ. ಅಂಥ ಕಡೆ ತೊಂದರೆಯಾಗುವುದರಿಂದ ಅಲ್ಲಿಗೆ ಹೆಚ್ಚು ನೀರನ್ನು ಕೊಡಬೇಕು. ಇದನ್ನು ತಾವು ಗಮನಿಸಬೇಕು.

ಇನ್ನು ಎರಡನೆಯದಾಗಿ, ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆದು ವಿಚಾರ ಬಹಳಷ್ಟು ಚರ್ಚೆಯಾದಾಗ ಈ ಸಮಸ್ಯೆ ಬಹಳ ಗಂಭೀರವಾದುದು, ಇದು ಪರಿಶೀಲಿಸುವುದಕ್ಕೆ ಯೋಗ್ಯವಾದುದು, ಆದ್ದರಿಂದ ಇದನ್ನು ಪರಿಶೀಲಿಸುತ್ತೇವೆಂದು ವಿಧಾನಸೌಧದ ಇನೇ ಮಹಡಿಯ ಕಾನ್‌ಫರೆನ್ಸ್ ಹಾಲ್‌ನಲ್ಲಿ ಹೇಳಿದ್ದಾರೆ. ತಾವು ಅನೇಕಸಾರಿ ವಿಾಟಿಂಗ್ ಮಾಡಿದಾಗ ಎಲ್ಲೆಲ್ಲಿ ಕಂಪಲ್ಸರಿಯಾಗಿ ಡಿಪಾಜಿಟ್ಸ್ ವಸೂಲ್ಮಾಡುತ್ತಿದ್ದಾರೆ ಅದನ್ನು ಸಂಪೂರ್ಣವಾಗಿ ಪುನರ್ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದೀರಿ. ನಾನ್ ಡೊಮೆಸ್ಟಿಕ್ ಪರ್ಪಸ್‌ಗೋಸ್ಕರ ಉಪಯೋಗಿಸುವವರಿಗೆ ಹೆಚ್ಚಿಗೆ ಟ್ಯಾಕ್ಸ್, ಹಾಕಿ ಅದಕ್ಕೆ ನಮ್ಮ ಆಬ್ಜಕ್ಷನ್ ಇಲ್ಲ. ಆದರೆ ಡೊಮೆಸ್ಟಿಕ್ ಪರ್ಪಸ್‌ಗೆ ಉಪಯೋಗಿಸುವವರಿಗೆ ಮಾತ್ರ ಹಾಕಬೇಡಿ. ಇವತ್ತು ತಮ್ಮ ಲೆಕ್ಕಾಚಾರದ ಪ್ರಕಾರ ವಿಾಟರ್ ಹೊಂದಿರುವ ಪ್ರತಿಯೊಬ್ಬರಿಂದಲೂ ಡಿಪಾಸಿಟ್ ತೆಗೆದುಕೊಳ್ಳುತಕ್ಕ ಹಣ ಮೂರೂವರೆ ಕೋಟಿ ರೂಪಾಯಿ ಆಗುತ್ತದೆ. ಆದರೆ ಕೇವಲ ನೀರಿನ ಕಂದಾಯದಿಂದ ನಿಮಗೆ ಬರತಕ್ಕದ್ದು ಮೂರೂವರೆ ಲಕ್ಷ ರೂ. ಮಾತ್ರ ಇದು ಬಹಳ ಅಲ್ಪ ಹಣವಾದ್ದರಿಂದ ಇದನ್ನು ಕಲೆಕ್ಟ್ ಮಾಡುವುದನ್ನು ಬಿಟ್ಟೇ ಬಿಡಿ. ಬಳಕೆದಾರರಿಂದ ಡಿಪಾಸಿಟ್ ತೆಗೆದುಕೊಳ್ಳುವುದಕ್ಕೆ ಏನೇನು ಕಾನೂನುಗಳನ್ನು ನಿಮ್ಮ ಅಧಿಕಾರಿಗಳಿಗೆ

ಕೊಟ್ಟಿದ್ದೀರೆಂಬುದಕ್ಕೆ ರೂಲ್ಸ್‌ನ್ನೂ ಕೋಟ್ ಮಾಡಿದಿರಿ. ಈಗಾಗಲೇ ತಾವು ಏನು ಹೇಳಿದ್ದೀರಿ ಎಂದರೆ ಬರುವ ಆಗಸ್ಟ್ ೮೨ ರಿಂದ ಕಾವೇರಿ ನೀರು ನಗರಕ್ಕೆ ಸರಬರಾಜಾಗುತ್ತದೆ. ಆಗ ೧ ಸಾವಿರ ಲೀಟರ್‌ಗೆ ರೂ. ೨.೫೦ ಪೈಸೆಯಂತೆ ಕೊಡಬೇಕು ಎಂದು, ಸ್ವಾಮಿ, ಈಗಿರತಕ್ಕದ್ದು ೧ ಸಾವಿರ ಲೀಟರ್‌ಗೆ ೪೦ ಪೈಸೆ. ಆದರೆ ಅದು ಇನ್ನು ಮುಂದೆ ೨.೫೦ ರೂ. ಆಗುತ್ತದೆ. ಕಳೆದ ೨ ವರ್ಷಗಳಲ್ಲಿ ಈಗಾಗಲೇ ೨ ಸಾರಿ ವಾಟರ್ ರೇಟನ್ನು ರಿವೈಸ್ ಮಾಡಿದ್ದೀರಿ. ಈಗ ೩ನೇ ಬಾರಿ ರಿವೈಸ್ ಆಗುತ್ತದೆಂದು ಹೇಳುತ್ತಿದ್ದೀರಿ. ಕುಡಿಯುವ ನೀರು ಜನತೆಯ ಪಾಲಿಗೆ ಬಿಳಿಯ ಆನೆಯಂತಾದರೆ ಅವರು ಏನು ಮಾಡಬೇಕು ಸ್ವಾಮಿ ? ನಮ್ಮ ರಾಜ್ಯದಲ್ಲಿ ಇಷ್ಟು ದುಬಾರಿ ನೀರು ಎಲ್ಲೂ ಇಲ್ಲ. ಈ ಜಲ ಮಂಡಲಿ ಏನಿದೆ ಇದೂಒಂದು ಬಿಳಿಯ ಆನೆಯಂತಿರುವುದಾದರೆ ದಯವಿಟ್ಟು ಮೊದಲು ಈ ಮಂಡಲಿಯನ್ನು ಅಬಾಲಿಷ್ ಮಾಡಿ. ಇದರಿಂದ ನಮ್ಮ ಸರ್ಕಾರಕ್ಕೆ ೧ ಕೋಟಿ ರೂಪಾಯಿ ಉಳಿಯುತ್ತದೆ. ಇದನ್ನು ಬಹಳ ಸೀರಿಯಸ್ ಆಗಿ ಕನ್ಸಿಡರ್ ಮಾಡಬೇಕು. ಅಲ್ಲದೆ ಈಗ ಹಾಕಿರುವ ವಾಟರ್ ರೇಟನ್ನೂ ಕೂಡ ತಾವು ದಯವಿಟ್ಟು ಪುನರ್ ಪರಿಶೀಲನೆ ಮಾಡಬೇಕು. ಇಷ್ಟೇ ಅಲ್ಲದೆ ಇನ್ನೂ ಒಂದು ಸಾರಿ ರೇಟ್ಸ್ ರಿವೈಸ್ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಹಾಗೆ ಮಾಡುವುದಾದರೆ ಹೋಟೆಲ್‌ಗಳವರ ಮೇಲೆ ಹಾಕಿ. ನಾನ್ ಡೊಮೆಸ್ಟಿಕ್ ಪರ್ಪಸ್‌ಗೆ ಯಾರು ಉಪಯೋಗಮಾಡುತ್ತಾರೆ ಅವರಮೇಲೆ ಹಾಕಬೇಕೆಂದು ಸರ್ಕಾರದವರನ್ನು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಬಸವನಗುಡಿ).—ಮಾನ್ಯ ಸಭಾಧ್ಯಕ್ಷರೆ, ಈ ಬೆಂಗಳೂರು ನಗರದಲ್ಲಿ ನೀರಿನ ದರವನ್ನು ಬದಲಾವಣೆ ಮಾಡುವಾಗ ನಗರದ ಎಲ್ಲ ಶಾಸಕರನ್ನೂ ಕರೆಸಿಕೊಂಡು ಇದರ ಬಗ್ಗೆ ಚರ್ಚೆಮಾಡುತ್ತೇವೆಂದು ಹೇಳಿದ್ದಿರಿ. ಆದರೆ ಈಸಾರಿ ಮಾತ್ರ ನೀರಿನ ದರವನ್ನು ಜಾಸ್ತಿ ಮಾಡುವಾಗ ನಮ್ಮನ್ನು ಕರೆಸಲಿಲ್ಲ. ನಮಗೆ ಇದು ಗೊತ್ತೇ ಇಲ್ಲ. ಈಗ ೧-೨-೮೨ರಿಂದ ಮತ್ತೆ ನೀರಿನ ದರ ಜಾಸ್ತಿಯಾಗುತ್ತದೆ. ಮಾನ್ಯ ರಾಂದೇವ್‌ರವರು ಹೇಳಿದಂತೆ ಒಂದು ಸಂಸಾರಕ್ಕೆ ೨೫ ಸಾವಿರ ಲೀಟರ್ ಫ್ರೀ ಎಂದು ಏನಂ ಹೇಳುತ್ತಿದ್ದೀರಿ ಇದು ಬಹಳ ಕಡಿಮೆ. ಇವತ್ತು ನಾನು ಇರತಕ್ಕ ಮನೆಯ ಪಕ್ಕಾರದಲ್ಲಿ ೩ ಸಂಸಾರಗಳಿಗೆ. ಆ ೩ ಸಂಸಾರಗಳಿಗೂ ಒಂದೇ ಮೀಟರ್ ಇದೆ. ಇವತ್ತಿನ ಲೆಕ್ಕದ ಪ್ರಕಾರ ಒಂದು ವರ್ಷಕ್ಕೆ ಒಂದೂವರೆ ಲಕ್ಷ ಲೀಟರ್‌ಗಿಂತ ಹೆಚ್ಚಿಗೆ ನೀರು ಬರುತ್ತದೆ. ಮೊದಲು ೩೫ ರೂ. ಬಿಲ್ ಬರುತ್ತಿದ್ದುದು ಕಳೆದಸಾರಿ ೧೧೦ ರೂ. ಬಂದಿದೆ. ಮಾನ್ಯ ಸಚಿವರ ಹೇಳಿಕೆ ಸದನವನ್ನು ಮಿಸ್‌ಲೀಡ್ ಮಾಡುವಂತಿದೆ. ಆದರೆ ಕೆಲವರು ಹೇಳಿದರು ಇದರಿಂದ ಬಡವರಿಗೆ ಯಾವುದೇ ತೊಂದರೆಯೂ ಆಗುವುದಿಲ್ಲ ಎಂದು. ಕಾವೇರಿ ೨ನೇ ಹಂತ ಮುಗಿದಮೇಲೆ ನೀರಿನ ದರವನ್ನು ಜಾಸ್ತಿ ಮಾಡಬಹುದೆಂದು ನಾವು ತಿಳಿದಿದ್ದೆವು. ಆದರೆ ಈಗ ಎರಡನೇಸಾರಿ ಜಾಸ್ತಿ ಮಾಡಿದ್ದೀರಿ. ತಾವು ಈರೀತಿ ೨-೩ ಸಾರಿ ನೀರಿನ ದರವನ್ನು ಹೆಚ್ಚುಮಾಡುವುದು ಬೇಡ. ಒಂದೇಸಾರಿ ಬೆಂಗಳೂರಿನ ಎಲ್ಲ ಶಾಸಕರನ್ನೂ ಮತ್ತು ಲೋಕಸಭಾ ಸದಸ್ಯರನ್ನೂ ಕರೆದು ನ್ಯಾಯ ಬದ್ಧವಾಗಿ ಎಷ್ಟು ಹೆಚ್ಚುಮಾಡಬೇಕೋ ಮಾಡಿ, ಈಗ ಬಳಕೆದಾರರಿಂದ ಏನು ಡಿಪಾಸಿಟ್ ಕೇಳುತ್ತಿದ್ದೀರಿ ಅದು ಸರಿಯಲ್ಲ. ಏಕೆಂದರೆ ನಾನು ಬಾಡಿಗೆ ಮನೆಯಲ್ಲಿದ್ದೇನೆ. ಮುಂದಿನವರ್ಷ ನಾನು ಮನೆ ಖಾಲಿ ಮಾಡಿದರೆ ನಾನು ಕಟ್ಟಿರತಕ್ಕ ಡಿಪಾಸಿಟ್ ವಾಪಸು ಬರುವುದಿಲ್ಲ. ಅದು ನಿಮ್ಮಲ್ಲೇ ಉಳಿಯುತ್ತದೆ. ಈ ಬೆಂಗಳೂರು ನಗರದಲ್ಲಿ ನೂರಕ್ಕೆ ೯೦ ಜನ ಬಾಡಿಗೆ ಮನೆಗಳಲ್ಲಿ ವಾಸಮಾಡುತ್ತಿದ್ದಾರೆ. ಅವರಿಗೆ ಈ ಹಣ ಸಿಕ್ಕುವುದಿಲ್ಲ. ಆದ್ದರಿಂದ ನಾನಾದರೂ ತಮಗೆ ಸಲಹೆ ಮಾಡುವುದೇನೆಂದರೆ, ಯಾರು ಬಾಡಿಗೆ ಮನೆಗೆ ಬರುತ್ತಾನೆ ಆತನಿಂದ ಡಿಪಾಸಿಟ್ ಕಟ್ಟಿಸಿಕೊಳ್ಳಿ. ಆತ ಮನೆಯನ್ನು ಖಾಲಿ ಮಾಡಿದರೆ ಅವನ ಹಣವನ್ನು ವಾಪಸ್ಸು ಕೊಟ್ಟು ಬೇರೆಯವರು ಆ ಮನೆಗೆ ಬಾಡಿಗೆಗೆ ಬಂದಾಗ ಅವರಿಂದ ಹಣ ಕಟ್ಟಿಸಿಕೊಳ್ಳಿ. ಇದು ಬಹಳ ಒಳ್ಳೆಯ ಪದ್ಧತಿಯಾಗುತ್ತದೆ. ಸ್ವಾಮಿ, ತಮ್ಮ ಹೇಳಿಕೆಯ ಪ್ರಕಾರ ೩೫ ಲಕ್ಷ ರೂ. ಬಳಕೆದಾರರಿಂದ ನೀರಿನ ಕಂದಾಯದ ರೂಪದಲ್ಲಿ ಏನು ಬರುತ್ತಿದೆ ಇದು ಬಹಳ ಕಡಿಮೆಯಾದ್ದರಿಂದ ದಯವಿಟ್ಟು ಇದನ್ನು ಮನ್ನಾ ಮಾಡುವುದು ಒಳ್ಳೆಯದು. ಇದನ್ನು ಮನ್ನಾ ಮಾಡುವುದರಿಂದ ಸರ್ಕಾರಕ್ಕೆ ಆಂಥ ದೊಡ್ಡ ಹೊರೆ ಯಾವುದೂ ಆಗುವುದಿಲ್ಲ. ಆದ್ದರಿಂದ ಇದನ್ನು ಸರ್ಕಾರದವರು ದಯವಿಟ್ಟು ಪುನರ್ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಎಂ. ಚಂದ್ರಶೇಖರ್ (ಜಯನಗರ).— ಇದರಲ್ಲಿ ೨೫೦ ಲಕ್ಷ ಎಲೆಕ್ಟ್ರಿಸಿಟಿ ಟ್ಯಾರೀಫ್ ಹೆಚ್ಚಾಗಿರುವುದರಿಂದ ಬರ್ಡನ್ ಆಗುತ್ತದೆಂದು ಹೇಳುತ್ತಿದ್ದೀರಿ. ಈ ಒಂದು ಕಾರಣದಿಂದಾಗಿ ಕುಡಿಯುವ ನೀರಿನ ಸರಬರಾಜಿಗೆ ಬೋರ್ಡ್‌ನವರು ಏನಾದರೂ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ. drinking warter cames under essencial commodities ಎಂದು ಕೆ.ಇ.ಬಿ. ನವರು ಸಬ್‌ಸಿಡಿ ರೇಟ್‌ನಲ್ಲಿ ಅದನ್ನು ಸಪ್ಲೈ ಮಾಡುತ್ತಾರೆ. ಈಗ ಅನೇಕ ರೈತರಿಗೆ ತಾವು ಅನೇಕ ಸಬ್‌ಸಿಡಿ ರೇಟ್‌ಗಳಲ್ಲಿ ಎಲೆಕ್ಟ್ರಿಸಿಟಿ ೧೦ ಎಚ್.ಪಿ.ಗೆ ಕಡಿಮೆ ಇತ್ತು ಎಂದರೆ ಡಿಪಾಸಿಟ್ ಹಾಕಬೇಕಾಗಿತ್ತು. ರೇಟ್ಸ್ ಕೂಡಬಾರದಾಗಿತ್ತು. ಅದೇ ರೀತಿಯಲ್ಲಿ ರೂರಲ್ ವಾಟರ್ ಸಪ್ಲೈಗೂ ಸಬ್‌ಸಿಡಿ ರೇಟ್‌ನಲ್ಲಿ ಎಲೆಕ್ಟ್ರಿಸಿಟಿ ಸಪ್ಲೈ ಮಾಡುತ್ತೀರಿ. ಬೆಂಗಳೂರಿಗೂ ಸ್ಪೆಷಲ್‌ಆಗಿ ಎಲೆಕ್ಟ್ರಿಸಿಟಿ ಸಪ್ಲೈ ಮಾಡುವುದರಿಂದ ನಾವು ಸಬ್‌ಸಿಡಿ ರೇಟ್ ನಲ್ಲಿ ಡ್ರಿಂಕಿಂಗ್ ವಾಟರ್ ಸಪ್ಲೈಗೆ ಕೊಡಬೇಕಾಗುತ್ತದೆ ಎನ್ನುವುದನ್ನು ಡಿಮ್ಯಾಂಡ್ ಮಾಡಿ ಅದನ್ನು ತೆಗೆದುಕೊಳ್ಳಬೇಕಾಗುತ್ತದೆ. ಆವಾಗ ನಮಗೆ ರೇಟ್ ಕಡಿಮೆಯಾಗುತ್ತದೆ. ಮತ್ತೆ ಮತ್ತೊಂದು ಮಾತು ಏನು ಹೇಳುವುದೆಂದರೆ ೨೫ ಸಾವಿರ ಲೀಟರ್ ಕನ್‌ಸಮ್‌ಷನ್ ಆಗುವವರೆಗೂ ಏನು ಬರ್ಡನ್ ಆಗುವುದಿಲ್ಲವೆಂದು ಹೇಳಿದರೆ ಅದನ್ನು ಕಾರ್ಪೊರೇಷನ್‌ನವರು ಪರಿಸಿಕೊಳ್ಳುತ್ತಾರೆ. ಈಗ ಕಾರ್ಪೊರೇಷನ್ ಒಂದು ಕನೆಕ್ಷನ್‌ಗೆ ೨೫ ಸಾವಿರ ಎಂದು ಕೊಡುತ್ತಿದ್ದಾರೆ. ಇದು ಒಂದು ನಮಗೆ ಕ್ಲಾರಿಫಿಕೇಶನ್ ತಮ್ಮಿಂದ ಬೇಕು. ಕಾರ್ಪೊರೇಷನ್‌ಗೆ ಇಷ್ಟು ಕೋರ್ಸ್ ಎಂದು, ಬಲ್ಕ್ ಸಪ್ಲೈಗೆ ಎಂದು ರೇಟ್ ಏನಾದರೂ ರೈಸ್ ಮಾಡುತ್ತೀರಾ. ಹಾಗೇನಾದರೂ ಅವರಿಗೆ ಬಲ್ಕ್ ಕನ್ಸ್ಯೂಮರ್ಸ್‌ಗೆ ಕಾರ್ಪೊರೇಷನ್‌ಗೆ ಎಂದು ಹೇಳಿ ರೇಟ್ ಏನಾದರೂ ರೈಸ್ ಆದರೆ ಅವರು ನಮಗೆ ಟ್ರಾನ್ಸ್‌ಫರ್ ಮಾಡಿಯೇ ಮಾಡುತ್ತಾರೆ. ಏಳನೂರು ಹಾಕಿದರ ಇನ್ನು ಮುಂದಕ್ಕೆ ಟ್ಯಾಕ್ಸ್ ರೂಪದಲ್ಲಿ ಇಲ್ಲದಿದ್ದರೆ. ಬೇರೆ ರೂಪದಲ್ಲಿ ಹಾಕಿಯೇ ಹಾಕುತ್ತಾರೆ. ಇದು ಕೂಡ ಒಂದು ಕನೆಕ್ಷನ್‌ಗೆ ಏಳನೂರ ಎಂದರೆ ಎಷ್ಟು ಕನೆಕ್ಷನ್‌ಗೆ ಆದರೂ ಕನ್‌ಸಮ್‌ಷನ್ ೨೫ ಸಾವಿರ ಲೀಟರ್ ಒದಗುತ್ತದೆ ಎಂದರೆ ಬರ್ಡನ್ ನಮಗೆ ಟ್ರಾನ್ಸ್‌ಫರ್ ಆಗುವುದಿಲ್ಲ. ಇದು ಈಗ ಬಲ್ಕ್ ಕನ್ಸ್ಯೂಮರ್ಸ್ ಅಂಥ ಏನಾದರೂ ಪರಿಗಣನೆಗೆ ತೆಗೆದುಕೊಂಡು ರೇಟ್ಸ್ ಏನಾದರೂ ಟ್ಯಾರೀಫ್ ಜಾಸ್ತಿ ಆಯಿತು ಎಂದರೆ ಅವರು ನಮಗೆ ಟ್ರಾನ್ಸ್‌ಫರ್ ಮಾಡುತ್ತಾರೆ, ಅದಕ್ಕೆ ನಮಗೆ ಕ್ಲಾರಿಫಿಕೇಶನ್ ಬೇಕು.

ಮತ್ತೊಂದು ಏನು ಹೇಳಿದ್ದಾರೆಂದರೆ ಮೇಜರ್ ವರ್ಕ್ಸ್ ತೆಗೆದುಕೊಳ್ಳುವುದಕ್ಕೋಸ್ಕರವಾಗಿ ನಾವು ಡಿಪಾಸಿಟ್ ತೆಗೆದುಕೊಳ್ಳಬೇಕಾಗಿದೆ ಎಂದು ಹೇಳಿದ್ದಾರೆ. ಈಗ ಮೇಜರ್ ವರ್ಕ್ಸ್ ಮಾಡಬೇಕಾಗಿರುವುದರಿಂದ ಅವರಿಗೆ ೨೯-೨೫ ವರ್ಷಗಳಿಂದ ನಾವು ಏನಂ ಕನ್‌ಸ್ಯೂಮರ್ಸ್ ಆಗಿದ್ದರೂ ನಾವು ಹಿಂದಿನಿಂದ ಇರತಕ್ಕಂಥವರು ನಮ್ಮ ಮೇಲೆ ಏತಕ್ಕೆ ಈ ಬರ್ಡನ್ ಟ್ರಾನ್ಸ್‌ಫರ್ ಮಾಡುವುದು ? ಹೊಸ ಕನೆಕ್ಷನ್ ಯಾರು ತೆಗೆದುಕೊಳ್ಳುತ್ತಾರೋ ಅವರ ಮೇಲೆ ಹೆಚ್ಚಿನ ಬರ್ಡನ್ ಹಾಕಿ. ಬಹಳ ವ್ಯಯವಾಗುತ್ತದೆ ಅದಕ್ಕೋಸ್ಕರವಾಗಿ ಡಿಪಾಸಿಟ್ ಬೇರೆ ರೀತಿಯಲ್ಲಿ ಹೊಸ ಕನೆಕ್ಷನ್‌ಗೆ ತೆಗೆದುಕೊಳ್ಳುವವರ ಮೇಲೆ ಹಾಕಲಿ. ನಾವು ಹಿಂದಿನಿಂದಲೂ ಇರುವವರು ನಮಗೆ ಏತಕ್ಕೆ ಬರ್ಡನ್ ಟ್ರಾನ್ಸ್‌ಫರ್ ಆಗಬೇಕು ? ನಮಗೆ ಇದರಿಂದ ಏನು ಉಪಯೋಗವಾಗುತ್ತಿಲ್ಲ. ಹೆಚ್ಚಿನ ನೀರು ಕೂಡ ಬರುತ್ತಿಲ್ಲ. ಹೊಸ ಕನೆಕ್ಷನ್ ತೆಗೆದುಕೊಳ್ಳುವವರಿಗೆ ಬೇಕಾದರೆ ಡಿಪಾಸಿಟ್ ಹಾಕಲಿ. ಇದರ ಬಗ್ಗೆಯೂ ಕ್ಲಾರಿಫಿಕೇಷನ್ ಬೇಕು. ಮತ್ತೊಂದು ವಿಚಾರವೇನೆಂದರೆ ಸಪ್ಲೈನಿಂದ ಲೀಕೇಜ್ ಏನು ಇದೆ ಇದು ಬೆಂಗಳೂರು ಸಿಟಿಯಲ್ಲಿ ರಿಸೀವ್ ಮಾಡುವುದಕ್ಕೆ ಮೊದಲೇ ೨೦ ಪರ್ಸೆಂಟ್‌ರಷ್ಟು ವೇಸ್ಟೇಜ್ ಇದೆ ಎಂದು ಹೇಳುತ್ತಾರೆ. ಅದನ್ನು ಕಡಿಮೆ ಮಾಡುತ್ತೇವೆಂದು ಹೇಳಿದರೆ ನಮಗೆ ಸಾಕಷ್ಟು ಸೇವಿಂಗ್ಸ್ ಆಗುತ್ತದೆ. ಇದಕ್ಕೆ ಬೋರ್ಡ್ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ. ಕನೆಕ್ಷನ್‌ಗೆ ಯಾವುದೇ ರೇಟ್ಸ್ ಮಾಡಬೇಕ ದರೂ ಒಂದು ಟ್ಯಾರೀಫ್ ಕಮಿಟಿಯನ್ನು ಮಾಡಬೇಕು. ಆ ಬೋರ್ಡ್‌ನವರು ವೈಯಕ್ತಿಕವಾಗಿ ಡೈರೆಕ್ಟಾಗಿ ಒಂದು ಡಿಸಿಷನ್ ತೆಗೆದುಕೊಂಡು ಅವರೇ ರೇಟ್ಸ್ ರಿವೈಸ್ ಮಾಡತಕ್ಕಂಥದ್ದು ಇರುತ್ತವ. ಅದರ ಬದಲು ಟ್ಯಾರೀಫ್ ಕಮಿಟಿಯನ್ನು ಆ ಟ್ಯಾರೀಫ್ ಕಮಿಟಿಯ ಮುಂದೆ ಜನರ ಒಂದು ವಿಚಾರವನ್ನು ತೆಗೆದುಕೊಂಡು ಆಮೇಲೆ ರಿವೈಸ್ಡ್ ಮಾಡತಕ್ಕಂಥ ಮನಸ್ಸು ಮಾಡಬೇಕು. ಕೆ. ಇ. ಬಿ.ಯವರು ಒಂದು ಟ್ಯಾರೀಫ್ ಕಮಿಟಿ ಎಂದು ಮಾಡಿರುತ್ತಾರೆ. ಅವರು ಐದು ವರ್ಷಕ್ಕೊಮ್ಮೆ ಬಾರಿ ರೇಟ್ಸ್‌ನ್ನು ರಿವೈಸ್

† Indicates that remarks or speeches have not been revised by the member concerned.

ಮಾಡತಕ್ಕಂಥದ್ದು ಇರುತ್ತದೆ. ಅವರು ರೇಟ್ಸ್ ರಿವೈಸ್ ಮಾಡಬೇಕಾದರೆ ಟ್ಯಾರೀಫ್ ಕಮಿಟಿಯ ಮುಂದೆ ಹೋಗಬೇಕು. ಟ್ಯಾರೀಫ್ ಕಮಿಟಿಯವರು ಒಂದು ವರದಿಯನ್ನು ಕೊಡುತ್ತಾರೆ. ಈರೀತಿ ಬೋರ್ಡ್‌ನಲ್ಲಿ ಟ್ಯಾರೀಫ್ ಕಮಿಟಿ ಎಂದು ಯಾವುದೂ ಇಲ್ಲ. ಬೋರ್ಡ್‌ನವರೇ ಕುಳಿತುಕೊಂಡು ರೇಟ್ಸ್‌ನ್ನು ಅವರ ಮನಸ್ಸಿಗೆ ಬಂದಹಾಗೆ ರಿವೈಸ್ ಮಾಡುತ್ತಿರುತ್ತಾರೆ. ಈ ದೃಷ್ಟಿಯಿಂದ ಟ್ಯಾರೀಫ್ ಕಮಿಟಿಯನ್ನು ಕಾನ್‌ಸ್ಟಿಟ್ಯೂಟ್ ಮಾಡಬೇಕೆಂದು ಹೇಳುತ್ತೇನೆ. ಈ ಮೂರು ಸಾಲ್ಕು ವಿಚಾರಗಳಿಗೂ ಕ್ಲಾರಿಫಿಕೇಶನ್ ಕೇಳುತ್ತೇನೆ. ಈಗಾಗಲೇ ನಮ್ಮ ಸ್ನೇಹಿತರು ಹೇಳಿದಹಾಗೆ ಡೊಮಾಸ್ಟಿಕ್ ಸಪ್ಲೈಗೆ ಕನ್‌ಸ್ಯೂಮರ್ಸ್‌ಗೆ ೭೨ ಪರ್ಸೆಂಟ್ ಇದೆ ಅವರು ಏನು ಹೇಳುತ್ತಿದ್ದಾರೆ ಎಂದರೆ ಅವರಿಂದ ಕೇವಲ ೭ ಕೋಟಿ ಅಂದರೆ ಮೂರುವರೇ ಡಿಪಾಸಿಟ್ ಮೂರುವರೇ ಡಿಪಾಸಿಟ್ ರೇಟ್ಸ್ ರಿವೈಸ್ಡ್ ಆಗುತ್ತದೆಂದು ಹೇಳುತ್ತಾರೆ. ಒಟ್ಟು ಏಳು ಕೋಟಿಯಲ್ಲಿ ೩೫ ಲಕ್ಷ ಡೊಮೆಸ್ಟಿಕ್ ಕನ್‌ಸ್ಯೂಮರ್ಸ್ ಎಂದು ಏನು ಇದ್ದಾರೆ ಅವರಿಗೆ ಮನ್ನಾ ಮಾಡಿ ಅವರಿಗೆ ಯಾವ ರೀತಿ ಡಿಪಾಸಿಟ್ ಆಗಲಿ ಅಥವಾ ರಿವೈಸ್ಡ್ ರೇಟ್ಸ್ ಹಾಕದೆ ಇಂಡಸ್ಟ್ರಿಯಲ್ ಕನ್‌ಸ್ಯೂಮರ್ಸ್‌ಗಳಿಗೆ ಅಥವಾ ಹೋಟೆಲ್ ಕಮರ್ಷಿಯಲ್ ಬಿಸಿನೆಸ್ ಮಾಡುವವರಿಗೆ ಜಾಸ್ತಿ ಮಾಡುವ ರೀತಿಯಲ್ಲಿ ರೇಟ್ ರಿವೈಸ್ಡ್ ಆಗಲಿ, ಡಿಪಾಸಿಟ್ ಆಗಲಿ ಕಲೆಕ್ಷನ್ ಆವರಮೇಲೆ ಹಾಕಬೇಕೆಂದು ನಾನಾದರೂ ಹೇಳುತ್ತೇನೆ.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ ಮಾನ್ಯ ಲಕ್ಷ್ಮೀಸಾಗರ್, ಮಾನ್ಯ ರಾಮದೇವ್‌ರವರು, ಮಾನ್ಯ ಚಂದ್ರಶೇಖರ್‌ರವರು ಮತ್ತು ಮಾನ್ಯ ತಿಮ್ಮೇಗೌಡರು ಬಹಳವಾಗಿ ಪ್ರಸ್ತಾಪ ಮಾಡಿದ್ದಾರೆ ಇದಕ್ಕೂ ಮೊದಲು ಸಾಕಷ್ಟು ಸಲ ನಾವು ಇದರ ಬಗ್ಗೆ ಚರ್ಚೆ ಮಾಡಿದ್ದೇವೆ, ಈವತ್ತು ಅನಿವಾರ್ಯ ಪರಿಸ್ಥಿತಿ ಉಂಟಾಗಿರುತ್ತದೆ. ಈವತ್ತು ನಾವು ರೇಟ್ಸ್‌ನ್ನು ಹೆಚ್ಚು ಮಾಡಬೇಕಾಗಿದೆ. ಅವರು ಹೇಳಿದರು. ಆಕ್ಟ್‌ನಲ್ಲಿ ಪ್ರಾವಿಷನ್ ಇಲ್ಲವೆಂದು ಆಕ್ಟ್‌ನಲ್ಲಿ ಪ್ರಾವಿಷನ್ ಇದೆ. ೧೯೬೫ನೇ ಇಸವಿಯಲ್ಲಿ ಮಾಡಿದ್ದಾರೆ, ೧೯೭೫ನೇ ಇಸವಿಯಲ್ಲಿ ಮಾಡಿದ್ದಾರೆ. ೧೯೮೧ರಲ್ಲೂ ಕೂಡ ಮಾಡಿದ್ದಾರೆ. ಇದು ಕೂಡ ರೆಸಲ್ಯೂಷನ್ ಮುಂಖಾಂತರ ೧೯೬೫ರಲ್ಲಿ ರೈಸ್ ಮಾಡಿದ್ದಾರೆ. ತಾವು ನೋಡಿ ಇದರಲ್ಲಿ ಇದೆ. ಟೈಮ್ ಟು ಟೈಮ್ ಮಾಡಬೇಕೆಂದು ಇದೆ.

SRI A. LAKSHMISAGAR.—I understand the regulations for the purpose of fixing water rates for different kinds of consumers. But there is no provision which enables the Board to collect minimum deposits.

ಶ್ರೀ ಧರ್ಮಸಿಂಗ್.—ಆದರೆ ಈ ವಿಷಯ ಏನಾಗಿದೆ ಎಂದರೆ ೫೦ ಪರ್ಸೆಂಟ್ ಡೊಮ್ಯಾಸ್ಟಿಕ್ ಪಾಪ್ಯುಲೇಷನ್‌ಮೇಲೆ ಭಾರ ಬೀಳುತ್ತಿಲ್ಲ. ೫೦ ಪರ್ಸೆಂಟ್ ಪಾಪ್ಯುಲೇಷನ್ ಏನು ಇದ್ದಾರೆ ಮಿಡಲ್ ಕ್ಲಾಸ್ ಪೀಪಲ್ಸ್ ಅವರ ಮೇಲೆ ಬಾರ ಬೀಳುತ್ತಿಲ್ಲ. ೨೨ ಪರ್ಸೆಂಟ್ ಜನರು ಏನು ಇದ್ದಾರೆ ಇಂಡಸ್ಟ್ರಿಯಲಿಸ್ಟ್‌ಗಳ ಮೇಲೆ ಟ್ಯಾಕ್ಸ್ ಮುಖಾಂತರ ಕಲೆಕ್ಟ್ ಮಾಡುತ್ತಿದ್ದೇವೆ. ಒಟ್ಟು ೩೭೦ ಲಕ್ಷದಲ್ಲಿ ಡೊಮೆಸ್ಟಿಕ್ ಕನ್‌ಸ್ಯೂಮರ್ಸ್‌ನಿಂದ ೩೫ ಲಕ್ಷ ಮಾತ್ರ ಕಲೆಕ್ಟ್ ಮಾಡುತ್ತಿದ್ದೇವೆ. ಎಂದರೆ ನಾನ್ ಡೊಮೆಸ್ಟಿಕ್ ಅವರ ಮೇಲೆ ಯಾವ ವಿಧವಾದ ಭಾರವನ್ನು ಹಾಕುತ್ತಿಲ್ಲ. ಈವತ್ತು ಕಾವೇರಿ ಸೆಕೆಂಡ್ ಸ್ಟೇಜ್‌ಗೆ ಹೆಚ್ಚು ಹಣವನ್ನು ಕೊಡತಕ್ಕಂಥ ಪ್ಯಾಟ್ರನ್ ಏನು ಇದೆ ಆದಕ್ಕಾಗಿ ೨೨ ಕೋಟಿ ರೂಪಾಯಿಗಳು ನಮಗೆ ಸರ್ಕಾರದಿಂದ ಬರಬೇಕು, ೨೦ ಕೋಟಿ ಎಲ್.ಐ.ಸಿ ಯಿಂದ ಬರಬೇಕು. ೧೦ ಕೋಟಿ ಸರ್ಕಾರ ಕೂಡ ಸಾಲ ಕೊಡಬೇಕು. ಅದನ್ನು ಕೂಡ ಪಿ.ಡಬ್ಲ್ಯೂ.ಡಿ ಯಿಂದ ವಸೂಲು ಮಾಡಿ ಸರ್ಕಾರ ಕೊಡತಕ್ಕಂಥದ್ದು ಇದೆ. ಆದರೆ ಇದು ಮೂರುವರೆ ಕೋಟಿಯಲ್ಲಿ ಈವತ್ತು ಇಂಡಸ್ಟ್ರೀಸ್‌ನಿಂದ ನಾವು ವಸೂಲು ಮಾಡಬೇಕು. ಲೋನ್ ಕೂಡ ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ. ಅದರ ಪ್ರಕಾರ ಬೆಂಗಳೂರು ವಾಟರ್ ಸಪ್ಲೈ ಬೋರ್ಡ್ ಕೂಡ ಸಮಾಲೋಚನೆ ಮಾಡತಕ್ಕಂಥದ್ದಕ್ಕೆ ನಾವು ಒಪ್ಪಿ ಕೊಂಡಿದ್ದೇವೆ. ಆದರೆ ಕಂಪೆನಿ ಆಕ್ಟ್ ಪ್ರಕಾರ ಆಗಲಿಲ್ಲವೆಂದ ಮೇಲೆ ಬೇರೆ ಫಾರಮ್ ನೋಡಬೇಕಾಗುತ್ತದೆಂದು ಪರ್ಸನಲ್‌ಆಗಿ ಮಾತನಾಡಿ ಮೇಲೆ ಅವರು ಆಗ್ರಿಯಾಗಿದ್ದಾರೆ. ಆದ್ದರಿಂದ ಬೆಂಗಳೂರು ಜನರ ಮೇಲೆ ಸಾಮಾನ್ಯ ಜನರ ಮೇಲೆ ಏನು ಆಗುತ್ತಿಲ್ಲ. ಅವರು ಕೂಡ ಈವತ್ತು ತಮ್ಮ ಮಿಟಿಂಗ್ ಆದಮೇಲೆ ಜನರಿಗೆ ಮಾರ್ಚ್ ತಿಂಗಳ' ಕೊನೆಗೆ ಕೊಡಬೇಕೆಂದು ೨೭ನೇ ತಾರೀಖು ನಾವು ನೀವು ಕೂಡ ಮಾತನಾಡಿದ್ದೇವೆ. ಮಾತನಾಡಿದಮೇಲೆ ಈವತ್ತು ನಾವು ಮಾರ್ಚ್‌ನೊಳಗೆ, ಅಥವಾ

ಜೂನ್ ಒಳಗೆ ಡಿಸ್‌ಕನ್‌ಕ್ಷನ್ ಮಾಡಬಾರದೆಂದು ಹೇಳಿದ್ದೇವೆ. ಆದಕ್ಕೆ ಈವತ್ತು ಏನಾಗಿದೆ ನೀರಿನ ಕೊರತೆ ಇರುವುದರಿಂದ ನೀರಿನ ಕೊರತೆ ಇರುವ ಕಡೆ ೭೦ ಎಂ.ಜಿ.ಡಿ ಹೆಚ್ಚಿಸಬೇಕಾಗಿದೆ. ಈವತ್ತು ಶೀಘ್ರವಾಗಿ ಕೆಲಸ ಆಗುತ್ತಿದೆ. ತಾವು ಕೂಡ ಬಂದು ನೋಡಿದ್ದೀರಿ. ಇದನ್ನು ಮೇನೆಟೈನ್ ಮಾಡುವು ದಕ್ಕಾಗಿ ರೇಟ್ಸ್‌ನ್ನೂ ಕೂಡ ನಾವು ಜಾಸ್ತಿ ಮಾಡುತ್ತಿದ್ದೇವೆ. ಡಿಪಾಸಿಟ್ ಮಾಡತಕ್ಕಂಥ ರೀತಿಯಲ್ಲಿ ಸಹಾಯ ಮಾಡಬೇಕು. ಅದನ್ನೂ ಕೂಡ ನಾವು ಈವತ್ತು ಸಾಮಾನ್ಯ ಜನರ ಮೇಲೆ ಭಾರ ಬೀಳದ ಹಾಗೆ ನೋಡಬೇಕಾಗುತ್ತದೆ. ತಪ್ಪಿ ಅಭಿಪ್ರಾಯ ಏನು ಇದೆ ಆದಕ್ಕೂ ಮೊದಲು ಕೂಡ ಸೂಚನೆ ಯನ್ನು ವ್ಯಕ್ತಮಾಡಿದ್ದಾರೆ. ಅದಕ್ಕೆ ಹೆಚ್ಚಿನ ಗಮನವನ್ನು ಕೊಟ್ಟಿದ್ದೇವೆ. ಈಗಾಗಲೇ ನಮ್ಮ ಎಲ್ಲ ಸಚಿವರುಗಳು ಹೇಳಿದಹಾಗೆ ಕೋರ್ಟಿಗೂ ಕೂಡ ಹೋಗಿ ಅಪ್ರೋಚ್ ಮಾಡಿ ಸ್ಟೆ ಸಿಕ್ಕಿಲ್ಲ. ಈಗಾಗಲೇ ಎಲ್ಲ ಸೇರಿ ೯೦ ಲಕ್ಷ ರೂಪಾಯಿಗಳಲ್ಲಿ ಇದೆಲ್ಲವು ಆಗಬೇಕಾಗಿದೆ. ಈವತ್ತು ರಾಮ್‌ದೇವ್‌ರವರು ಪ್ರಸ್ತಾಪ ಮಾಡಿದ್ದಾರೆ ಈವತ್ತು ಹೊಸ ಒಂದು ವಠಾರದಲ್ಲಿ ಬೇರೆ ಬೇರೆ ಯಾರು ಇರುತ್ತಾರೋ ಅವರಿಗೆ ಸಪರೇಟ್ ಕನ್‌ಕ್ಷನ್ ಬೇಕಾದರೆ ಕೊಡುವುದಕ್ಕೆ ರೆಡಿ ಇದ್ದಾರೆ.

ಶ್ರೀ ಪಿ. ರಾಮ್‌ದೇವ್. ವಠಾರದ ಮನೆಗಳಲ್ಲಿ ಸಪರೇಟ್ ಕನೆಕ್ಷನ್ ಕೊಡುವುದಿಲ್ಲ. ಅದಕ್ಕೆ ಮನೆಯ ಓನರ್‌ಗಳು ಒಪ್ಪುವುದಿಲ್ಲ. ಆದ್ದರಿಂದ ಸಪರೇಟ್ ಕನೆಕ್ಷನ್ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಧರ್ಮಸಿಂಗ್.–ಸಾಕಷ್ಟು ಹಣವನ್ನು ಕೊಟ್ಟು ಸಾಕಷ್ಟು ಕನೆಕ್ಷನ್ ತೆಗೆದುಕೊಂಡಿದ್ದಾರೆ. ಆದಕ್ಕೆ ಏನಾಗುತ್ತದೆ ಎಂದರೆ ಎಲ್ಲರ ಮೇಲೆ ಬೀಳುತ್ತಿದೆ. ಇದರ ಬಗ್ಗೆಯೂ ಕೂಡ ನಮ್ಮ ಇಂಜಿನಿಯರ್‌ಗಳ ಜೊತೆಯಲ್ಲಿ ಡಿಸ್‌ಕಸ್ ಮಾಡಿ ಗಮನ ಕೊಡುತ್ತಿದ್ದೇವೆ. ಈವತ್ತು ಕಾರ್ಪೋರೇಷನ್‌ನವರು ಯಾವ ರೀತಿ ಟೆನಮೆಂಟ್ಸ್ ೧೦ ಇದ್ದರೆ ಅದರೊಳಗೆ ಹೋಗುತ್ತಾರೆಂದರೆ ಈವತ್ತು ೨೫ ಪರ್ಸೆಂಟ್ ಹಾಕಲೇ ಬೇಕಾಗುತ್ತದೆ. ಮಿಕ್ಕಿದ್ದಕೆಲ್ಲ ಚಾರ್ಜ್ ಮಾಡಲೇಬೇಕಾಗುತ್ತದೆ. ಈವತ್ತು ಬಡವರ ಕನೆಕ್ಷನ್ ಕೊಡ ತಕ್ಕಂಥದ್ದು ಏನು ಇರುತ್ತದೆ ಅದಕ್ಕೆ ಬಹಳ ಪ್ರಾಮುಖ್ಯತೆಯನ್ನು ಕೊಡಬೇಕಾಗಿರುತ್ತದೆ. ಇದರ ಬಗ್ಗೆ ಶ್ರೀಮಾನ್ ಶಾಮಣ್ಣನವರ ಜೊತೆಯಲ್ಲೂ ಮತ್ತು ಮಾನ್ಯ ಮಂಖ್ಯಿ ಮಂತ್ರಿಗಳ ಜೊತೆಯಲ್ಲಿಯೂ ಕೂಡ ಮಾತನಾಡಿದ್ದೇನೆ. ಈವತ್ತು ಎಲೆಕ್ಟ್ರಿಸಿಟಿ ಬಗ್ಗೆ ಕೂಡ ನಾವು ಮಾತನಾಡುವವರಿದ್ದೇವೆ. ಈವತ್ತು ಎಲ್ಲ ಕಡೆಗೆ ಡೊಮೆಸ್ಟಿಕ್ ಪರ್‌ಪಸ್‌ಗೆ ಕೊಡುತ್ತಿದ್ದಾರೆ. ಇಂಡಸ್ಟ್ರಿಗೂ ಕೊಡುತ್ತಿದ್ದಾರೆ. ಬೇರೆ ಕಡೆಗೆ ಸರ್ಕಾರದವರು ಸಬ್‌ಸಿಡಿ ಕೊಡುತ್ತಿಲ್ಲ. ಈವತ್ತಿನ ದಿವಸ ಎಲೆಕ್ಟ್ರಿಸಿಟಿ ರೇಟ್ ಸಿಕ್ಕಾಪಟ್ಟೆ ಚಾಸ್ತಿಯಾಗಿದೆ. ಹಿಂದೆ ೨೨ ಪೈಸೆ ಇದ್ದುದು ಈ ಇವತ್ತಿಡಿ ಆಗಿರುತ್ತದೆ. ಇದರಿಂದ ಸಮಗೆ ಹೆಚ್ಚಾಗಿ ಭಾರ ಬೀಳುತ್ತಿದೆ. ಈ ರೀತಿ ಹೆಚ್ಚಾದುದರಿಂದ ಬೀಳತಕ್ಕಂಥ ಭಾರವನ್ನು ಯಾವ ರೀತಿ ಬೋರ್ಡ್ ಜನರಿಂದ ವಸೂಲು ಮಾಡಬೇಕು ಎಂಬುದರ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. ಮೇನೆಟೈನ್ಸ್ ಮಾಡ ಬೇಕಾಗಿರುವುದರಿಂದ ವಸೂಲು ಮಾಡಲೇಬೇಕಾಗಿರುತ್ತದೆ. ಇದರ ಬಗ್ಗೆಯೂ ಯೋಚನೆ ಮಾಡುತ್ತಿ ದ್ದೇವೆ. ಆದರೆ ಕೂಡಲೇ ಜನರಿಗೆ ಯಾವ ರೀತಿಯಾದ ತೊಂದರೆ ಮಾಡಲು ಹೋಗುವುದಿಲ್ಲ. ಈಗ ನಾವು ಕಾವೇರಿ ಎರಡನೇ ಹಂತ ಯೋಜನೆಗೆ ಸರ್ಕಾರ ಸಾಲ ಕೊಡಬೇಕಾಗಿದ್ದರೂ, ಈಗ ಕೊಡತಕ್ಕಂಥ ಪರಿಸ್ಥಿತಿಯು ಇಲ್ಲ. ಲೋನ್ ತೆಗೆದುಕೊಂಡು ವಿರ್ಚುಮಾಡಬೇಕೆಂದು ಹೇಳುತ್ತಿದ್ದಾರೆ. ಮುಂದೆ ಕಾವೇರಿ ಮೂರನೇ ಹಂತದ ವೇಳೆಗೆ ಬೆಂಗಳೂರು ಪಾಪ್ಯುಲೇಷನ್ ೨೦೮ ಆಗುತ್ತದೆಂದು ಊಹಿಸಲಾಗಿದೆ ಇದಕ್ಕೆ ಸೆಂಟ್ರಲ್ ಮಿನಿಸ್ಟರ್‌ರವರ ಕಾನ್‌ಫರೆನ್ಸ್‌ನಲ್ಲಿ ಹೆಚ್ಚು ಹಣ ಸರ್ಕಾರಕ್ಕೆ ಕೇಂದ್ರದಿಂದ ಬರ ಬೇಕೆಂದು ಒತ್ತಾಯ ಮಾಡಿದ್ದೇವೆ. ಜನಸಂಖ್ಯೆ ಹೆಚ್ಚಾದ ಕಾರಣ ಬೆಂಗಳೂರು ಹೆಚ್ಚು ಹಣವನ್ನು ಕೊಡಬೇಕೆಂದು ವರ್ಲ್ಡ್ ಬ್ಯಾಂಕ್‌ನಿಂದಲೂ ಕೂಡ ಹೆಚ್ಚು ಹಣವನ್ನು ಕೊಡಬೇಕೆಂದು ಕೇಳಿದ್ದೇವೆ. ಮಾನ್ಯ ಜೆ. ಹೆಚ್. ಪಟೇಲ್‌ರವರು ನಮ್ಮ ಕಡೆಯೇ ನೋಡುತ್ತಿರುತ್ತಾರೆ. ಬೆಂಗಳೂರಿಗೆ ಮಾತ್ರ ಕೊಡುತ್ತೀರಿ, ಬೇರೆಕಡೆಗೆ ಕೊಡುವುದಿಲ್ಲವೆಂದು ತಿಳಿದುಕೊಳ್ಳಬಾರದು ಶಾಂತಿಸಾಗರ,ಹುಕ್ಕೇರಿ ಇದಕ್ಕೂ ಕೂಡ ಕೊಡಬೇಕೆಂದು ಕೇಳಿದ್ದೇವೆ.

ಶ್ರೀ ಎ. ಲಕ್ಷ್ಮೀಸಾಗರ್.—ಸರ್ಕಾರ ಕೂಡ ಕೊಡಬೇಕಾಗಿರತಕ್ಕಂಥ ೧೨ ಕೋಟಿ ರೂಪಾಯಿಗಳ ಸಾಲವನ್ನು ಜಲಮಂಡಲಿಯವರಿಗೆ ಕೊಟ್ಟಿದ್ದಾರೆಯೇ? ಕೊಡದಿದ್ದರೆ ಯಾವಾಗ ಕೊಡುತ್ತೀರಿ?. ಕೇಂದ್ರ ಸರ್ಕಾರದಿಂದ ಬರಬೇಕು ಎನ್ನುವವರಲ್ಲಿ ನಾವೂ ಕೂಡ ಒತ್ತಾಯಪಡಿಸುತ್ತಿರುತ್ತೇವೆ.

ಶ್ರೀ ಧರ್ಮಸಿಂಗ್.—ಕೊಡತಕ್ಕಂಥಾ ಸಾಲ ಕೊಡಬೇಕೆಂದು ಕೇಳಿದ್ದೇವೆ. ಈಗ ಪೂರ್ಣವಾಗಿ ಸರ್ಕಾರ ಗ್ಯಾರಂಟ್ ಕೊಡಬೇಕು ಎನ್ನತಕ್ಕಂಥ ಸಂದರ್ಭದಲ್ಲಿ ವಿಚಾರ ಮಾಡಬೇಕಾಗಿದೆ. ಎಲ್ಲ ಕಡೆಗೂ

ಹಣವನ್ನು ಖರ್ಚುಮಾಡಬೇಕಾಗಿದೆ. ಕೇವಲ ಬೆಂಗಳೂರಷ್ಟಕ್ಕೆ ಕೊಡಬೇಕೆಂದರೆ ಸರ್ಕಾರಕ್ಕೂ ತೊಂದರೆಯಾಗುತ್ತದೆ. ಎಲ್ಲವನ್ನು ಕಲೆಕ್ಟ್ ಮಾಡಿದರೆ ೧೦ ಲಕ್ಷ ರೂಪಾಯಿ ಆಗುತ್ತದೆ, ೨೨ ಪರ್ಸೆಂಟ್ ಜನರ ಮೇಲೆ ಹೊರೆ ಬೀಳುತ್ತದೆ. ಅದೇನು ಹೆಚ್ಚಾಗುವುದಿಲ್ಲ.

ಶ್ರೀ ಎಂ. ಚಂದ್ರಶೇಖರ್.—ಬಡ್ಡಿ ಕೊಡುತ್ತೀರಿ ಹಣ್ಣು ತನ್ನಿ, ಕನ್ಸೂಮರ್ ಹತ್ತಿರ ತೆಗೆದು ಕೊಂಡರೆ ಬಡ್ಡಿ ಕೊಡುತ್ತೀರಿ, ಅವರ ಡಿಪಾಸಿಟ್‌ಗೂ ಬಡ್ಡಿ ಕೊಡುತ್ತೀರಿ ಅದೇ ರೀತಿ ನಮಗೂ ಬಡ್ಡಿ ಕೊಡಿ.

ಶ್ರೀ ಧರ್ಮಸಿಂಗ್.—ನಾವು ಎಲ್ಲ ಸಾಲ ತೆಗೆದು ಕೊಂಡರು ಜನರ ಮೇಲೆ ಹಾಕಬೇಕು. ಬ್ಯಾಂಕಿನಿಂದ ಸಾಲ ತಂದರೂ ಕೂಡ ಬಡ್ಡಿಯನ್ನು ಜನರ ಮೇಲೆ ಹಾಕಬೇಕಾಗುತ್ತದೆ.

Representations

ಶ್ರೀ ವಿ. ಬಿ. ಭಾವಿ.—ನಾನು ನಿಯಮ ೬೩ರ ಕೆಳಗಡೆ ಮುಖ್ಯಮಂತ್ರಿಯವರಿಗೆ ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದೇನೆ. ಅತಿ ಗಂಭೀರವಾದ ವಿಷಯ. ವಿಷಯವೇನೆಂದರೆ ಇವತ್ತು ಪ್ರಜಾಪ್ರಭುತ್ವದಲ್ಲಿ ಪತ್ರಿಕಾ ಸ್ವಾತಂತ್ರ್ಯಕ್ಕೆ ಇರತಕ್ಕ ಹಕ್ಕನ್ನು ನಮ್ಮ ಹಕ್ಕನ್ನು ದುರುಪಯೋಗ ಮಾಡಲಾಗಿದೆ. ಪ್ರಜಾಪ್ರಭುತ್ವದ ತಳಹದಿಯ ಮೇಲೆ ಸ್ಥಾಪಿತವಾದ ಸರ್ಕಾರ, ಇರತಕ್ಕ ಹಕ್ಕನ್ನು ಮೊಟಕುಗೊಳಿಸಿದೆ ಇದು ಗಂಭೀರವಾದ ಪ್ರಶ್ನೆ ಇದೆ. ಪ್ರಜಾಪ್ರಭುತ್ವದಲ್ಲಿ ಇವತ್ತು ಪ್ರಜಾವಾಣಿ ಪತ್ರಿಕೆಯ ಕೋಲಾರದ ವರದಿಗಾರನ ಮನೆಗೆ ಕೆಲವರು ನುಗ್ಗಿ ಮನ ಬಂದಂತೆ ನಡೆದುಕೊಂಡಿದ್ದಾರೆ. ಸರ್ಕಾರ ಈ ಬಗ್ಗೆ ಕಣ್ಣುಮುಚ್ಚಿ ಕುಳಿತುಕೊಳ್ಳಬಾರದು, ಇದೊಂದು ಗಂಭೀರವಾದ ಅಪಾದನೆ.

MR. DEPUTY SPEAKER.—It is under examination. It will be taken up.

ಶ್ರೀ ವಿ. ಬಿ. ಭಾವಿ.—ಉಪಾಧ್ಯಕ್ಷರೇ ಇದು ಗಂಭೀರವಾದ ವಿಷಯ. ಕಾನೂನು ಹಕ್ಕು ಉಲ್ಲಂಘನೆ ಮಾಡಿರತಕ್ಕ ಸಾಕಷ್ಟು ವಿಷಯಗಳು ದೊರೆತಿವೆ. ಅಧಿಕಾರವನ್ನು ನಮ್ಮ ಕೈಯ್ಯಲ್ಲಿ ತೆಗೆದು ಕೊಂಡು...

MR. DEPUTY SPEAKER.—You have given the notice. It is under consideration.

SRI V. B. BHAVI.—I want an assurance from the Government that the life and property of the press reporter will be protected. ವರದಿಗಾರ ಏನಾದರೂ ಮನೆಯಲ್ಲಿ ಇದ್ದಿದ್ದರೆ, ಆತನ ಶವವನ್ನು ನಾವು ಇವತ್ತು ನೋಡಬೇಕಾಗಿತ್ತು. ಪತ್ರಿಕೆಗಳು ಸಪ್ಪು ಮಾಡಿದರೆ ಕಾನೂನು ರೀತ್ಯ ದಾರಿಗಳಿವೆ. ಅದನ್ನು ಬಿಟ್ಟು ಯಾರೇ ಆಗಲಿ ಕಾನೂನನ್ನೇ ತಮ್ಮ ಕೈಯಲ್ಲಿ ತೆಗೆದುಕೊಳ್ಳಬಾರದು. ಪ್ರಜಾಪ್ರಭುತ್ವದ ತಳಹದಿಯ ಮೇಲೆ ನಮ್ಮದೇ ಸರ್ಕಾರ ಸ್ಥಾಪನೆಯಾಗಿದೆ. ಪ್ರಜಾಪ್ರಭುತ್ವದ ಹಕ್ಕುಗಳ ರಕ್ಷಣೆ ಆಗಬೇಕಾಗಿದೆ. ಕಾನೂನು ಸಚಿವರು ರಕ್ಷಣೆ ಕೊಡುವ ಬಗ್ಗೆ ಭರವಸೆ ಕೊಡಬೇಕು.

ಶ್ರೀ ವೈ. ರಾಮಕೃಷ್ಣ.—ಇಲ್ಲಿ ಆ ಪ್ರಶ್ನೆ ಉದ್ಭವಿಸುವುದಿಲ್ಲ. ನೋಟೀಸ್ ಕೊಟ್ಟಮೇಲೆ, ವಿವರ ತರಿಸಿ ಕಾನೂನು ಪ್ರಕಾರ ಹೇಳಿಕೆ ಕೊಡುವುದಕ್ಕೆ ತಯಾರಾಗಿದ್ದೇನೆ.

ಶ್ರೀ ವಿ. ಬಿ. ಭಾವಿ.—ಸರ್ಕಾರ ವಿವರ ತರಿಸಿ ಉತ್ತರ ಕೊಡುವವರೆಗೂ ಯಾರು ಹೊಣೆ?

ಶ್ರೀ ಆಜೀಜ್ ಸೇಠ್.—ತಾವು ಹೇಳುವುದೇನು ಆಶ್ಚರ್ಯವಲ್ಲ. ಏಕೆಂದರೆ ಸರ್ಕಾರದ ವಿರೋಧವಾಗಿ ವರದಿ ಮಾಡಿದ್ದಕ್ಕೆ ಹಿಂದೆ ಮೂರು ಪತ್ರಿಕೆಗಳ ಕಛೇರಿಗಳ ಮೇಲೆ ರೂಲಿಂಗ್ ಪಾರ್ಟಿಯವರೇ ಧಾಳಿ ಮಾಡಿದ್ದಾರೆ. ಹೀಗೆ ಮಾಡಿರುವಾಗ ಸರ್ಕಾರ ಎಲ್ಲಿ ರಕ್ಷಣೆ ಕೊಡುತ್ತದೆ?.

SRI V. B. BHAVI.—That is a different matter. Here it is the question of life a person and his family members. I request the Chair to take up the matter early.

ಶ್ರೀ ವೈ. ರಾಮಕೃಷ್ಣ.—ಮಾನ್ಯ ಸದಸ್ಯರು ನೋಟೀಸ್ ಕೊಟ್ಟಿದ್ದೇನೆಂದು ಹೇಳುತ್ತಿದ್ದಾರೆ, ಅದನ್ನು ಪರಿಶೀಲನೆ ಮಾಡಿ ಕಾನೂನು ಪ್ರಕಾರವಾಗಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಲಾಗುತ್ತದೆ.

ಶ್ರೀ ವಿ. ಬಿ. ಭಾವಿ.—ತಾವು ಪರಿಶೀಲಿಸುವಷ್ಟರಲ್ಲಿಗೂ ಅಲ್ಲಿ ಹೊಣೆಗಾರರು ಯಾರು ?

SRI Y. RAMAKRISHNA.—Government is there. It will give protection to all the citizens.

DISCUSSION ON THE MOTION OF THANKS

ಶ್ರೀ ವಿ. ಎ. ಮತ್ತಿಕಟ್ಟಿ.—ಮಾನ್ಯ ಉಪಾಧ್ಯಕ್ಷರೇ ನಾನು ನಮ್ಮ ರಾಜ್ಯಪಾಲರು ಜಂಟೀ ಅಧಿವೇಶನವನ್ನು ಉದ್ದೇಶಿಸಿ ಮಾಡಿದ ಭಾಷಣಕ್ಕೆ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಮಾನ್ಯ ಬಸಪ್ಪ ನವರು ತಂದಂತಹ ನಿರ್ಣಯವನ್ನು ಬೆಂಬಲಿಸುತ್ತೇನೆ. ಕರ್ನಾಟಕ ರಾಜ್ಯ ಸರ್ಕಾರ ಭರತಖಂಡದಲ್ಲಿ ಜನಸಾಮಾನ್ಯರಿಗೆ ಹಿಂದುಳಿದವರಿಗೆ, ಅಲ್ಪಸಂಖ್ಯಾತರಿಗೆ, ರೈತರಿಗೆ ವ್ಯವಸ್ಥಿತವಾಗಿ ರಕ್ಷಣೆ ಕೊಡುವುದರ ಜೊತೆಗೆ, ಸಮಾಜದ ಆರ್ಥಿಕಾಭಿವೃದ್ಧಿ ಒಂದು ವರ್ಷ ಕಾಲ ಮಾಡಿದಂತಹ ಕಾರ್ಯಸಾಧನೆಗೆ ನನ್ನ ಸಂಪೂರ್ಣ ಬೆಂಬಲ ಕೊಡುತ್ತಾ ಮುಂದೆ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಮುಂದಿನ ಅಭಿವೃದ್ಧಿಯ ಕಾರ್ಯಕ್ರಮಗಳ ಸಲುವಾಗಿ...

ಶ್ರೀ ಅಜೀಜ್‌ಸೇಠ್.—ಒಂದು ವರ್ಷ ಅಲ್ಲ, ಎರಡು ವರ್ಷ ರಾಜ್ಯಭಾರ ಮಾಡಲಾಗಿದೆ.

ಶ್ರೀ ವಿ. ಎ. ಮತ್ತಿಕಟ್ಟಿ.—ಕರ್ನಾಟಕ ಸರ್ಕಾರ ಹಾಕಿಕೊಂಡಂತಹ ಹಲವಾರು ಯೋಜನೆಗಳನ್ನು ಏನು ಹೇಳಿದ್ದಾರೆ ಅವು ಬಹಳ ಸೂಕ್ತವಾಗಿವೆ. ನಾವೆಲ್ಲ ಬಹಳಷ್ಟು ಹೆಮ್ಮೆಪಡತಕ್ಕ ವಿಷಯ ಅಂದರೆ, ನಮ್ಮ ರಾಷ್ಟ್ರದ ಪ್ರಧಾನ ಮಂತ್ರಿ ಹಾಗೂ ರಾಷ್ಟ್ರದ ಸಾಮಾನ್ಯ ಜನರ ಆಶಾಕಿರಣವಾವಂತಹ ಶ್ರೀಮತಿ ಇಂದಿರಾಗಾಂಧಿಯವರು ಕರ್ನಾಟಕ ಸರ್ಕಾರದ ಸಾಧನೆಗಳನ್ನು ವೀಕ್ಷಿಸಿ. ಇಷ್ಟಿ ಕೆಲಸ ನಡೆದಿದೆ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿರುವುದು ನಮಗೆಲ್ಲಾ ಹೆಮ್ಮೆಯ ವಿಷಯವೆಂದು ಹೇಳಲಿಕ್ಕೆ ಇಚ್ಛಿಪಡುತ್ತೇನೆ.

೪-೦೦ ಪಿ.ಎಂ.

ಈ ವರ್ಷದ ಆದಿ ಭಾಗದಲ್ಲಿ ಕರ್ನಾಟಕದ ೩-೪ ಜಿಲ್ಲೆಗಳಲ್ಲಿ ಹೆಚ್ಚು ಮಳೆಯಾದ ಕಾರಣ ಜನರ ಆಸ್ತಿಪಾಸ್ತಿಗೆ ಹಾಗೂ ಬೆಳೆಗಳಿಗೆ ಹಾನಿಯಾಯಿತು. ಆದೇ ರೀತಿ ರಾಜ್ಯದ ೧೫ ಜಿಲ್ಲೆಗಳಲ್ಲಿ ಭೀಕರ ಬರಗಾಲ ಬಂದ ಕಾರಣದಿಂದ ಜನರಿಗೆ ಉದ್ಯೋಗ ಒದಗಿಸಿಕೊಡಲು ಸರ್ಕಾರ ಅಭಿವೃದ್ಧಿ ಕಾರ್ಯಕ್ರಮ ಗಳನ್ನು ಕೈಕೊಂಡಿತು. ಗ್ರಾಮೀಣ ಪ್ರದೇಶಗಳಿಗೆ ರಸ್ತೆ ಸಂಪರ್ಕ ಕಲ್ಪಿಸಲು, ಭೂಮಿಯನ್ನು ಸಮಪಾತಗೊಳಿಸಲು ಹಾಗೂ ಕುಡಿಯುವ ನೀರನ್ನು ಒದಗಿಸಿಕೊಡುವಂತಹ ಕೆಲಸಗಳನ್ನು ಕೈಕೊಳ್ಳ ಲಾಯಿತು ನಮ್ಮ ಉತ್ತರ ಕರ್ನಾಟಕದ ಭಾಗದ ಜನರು ಹಾಗೂ ಹೈದರಾಬಾದ್ ಕರ್ನಾಟಕದ ಗ್ರಾಮೀಣ ಜನರು ಇವೊತ್ತಿಗೂ ಕೆರೆಯ ನೀರನ್ನು ಕುಡಿಯಲು ಬಳಸುತ್ತಿದ್ದಾರೆ. ಆದ್ದರಿಂದ ಈ ಕೆರೆಗಳನ್ನು ಆಳಪಡಿಸುವಂತಹ ಕೆಲಸ ಕೈಕೊಂಡು ನಮ್ಮ ಸರ್ಕಾರ ಪ್ರತಿದಿನವೂ ೩ ಲಕ್ಷ ಜನರಿಗೆ ಕೂಲಿ ಕೆಲಸ ಒದಗಿಸುವಂತಹ ಕಾರ್ಯಕ್ರಮವನ್ನು ನಡೆಸಿಕೊಂಡು ಬಂತು. ಇದಕ್ಕಾಗಿ ೨೫ ಕೋಟಿ ರೂಪಾಯಿ ಗಳನ್ನು ವಿಚರ್ಚ ಮಾಡಲಾಗಿದೆ. ಇದೇ ರೀತಿ ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ, ಧಾರವಾಡದ ಹಲವಾರು ಭಾಗಗಳಲ್ಲಿ, ಮೈಸೂರು, ಕೋಲಾರ ಜಿಲ್ಲೆಗಳಲ್ಲಿ ಭೀಕರವಾದಂಥ ಮಳೆ ಬಂದು ಜನಜೀವನ ಅಸ್ತವ್ಯಸ್ತಗೊಂಡ ಕಾರಣ, ಅದನ್ನೆಲ್ಲಾ ಸರಿಪಡಿಸಲು ೨.೮೧ ಲಕ್ಷ ರೂ.ಗಳನ್ನು ನಮ್ಮ ಸರ್ಕಾರ ಒದಗಿಸಿತು. ಈಗ ಈ ಜಿಲ್ಲೆಗಳಲ್ಲಿಯೂ ಅಭಿವೃದ್ಧಿ ಕೆಲಸಗಳು ನಡೆದಿವೆ.

ಇನ್ನು ಉಳುವವನೇ ನೆಲದ ಒಡೆಯನಾಗಬೇಕ , ಬೆವರು ಸುರಿಸಿ ಕೆಲಸ ಮಾಡುವಂತಹ ಗೇಣಿದಾರನೇ ಭೂಮಾಲೀಕನಾಗಬೇಕೆಂಬ ತತ್ವವನ್ನು ೧೯೭೫ನೇ ಇಸವಿಯಲ್ಲಿ ಚಾರಿಯಲ್ಲಿ ತಂದರೂ ಸಹ ಅದು ಸಂಪೂರ್ಣವಾಗಿ ಕಾರ್ಯಗತವಾಗಿರಲಿಲ್ಲ. ಈ ಒಂದು ಕಾರ್ಯವನ್ನು ೧೯೮೧ರ ನವೆಂಬರ್ ಒಂದರೊಳಗಾಗಿ ಮುಗಿಸಬೇಕೆಂದು ಈಗಿರುವ ಭೂನ್ಯಾಯ ಮಂಡಳಿಗಳ ಜೊತೆಗೆ ಇನ್ನೂ ನೂರು